# ‘ಶ್ರೀರಾಮಕೃಷ್ಣ ವಚನವೇದ’ ಭಾವಧಾರೆ - 17

ಸ್ವಾಮಿ ನಿತ್ಯಸ್ಥಾನಂದ

## ಗೃಹಸ್ಥರಿಗೆ ಬುದ್ಧಿವಾದ



**ಅಂ**ದು ೧೩ನೇ ಆಗಸ್ಟ್ ೧೮೮೨, ಭಾನುವಾರ. ಪರಮಹಂಸರು ಕೇದಾರನೇ ಮೊದಲಾದ ಭಕ್ತರೊಡನೆ ದಕ್ಷಿಣೇಶ್ವರದ ತಮ್ಮ ಕೊಠಡಿಯಲ್ಲಿ ಮಾತನಾಡುತ್ತ ಕುಳಿತಿದ್ದಾರೆ. ಅವರು ಸಮಾಧಿಯ ಸಂಬಂಧವಾಗಿ ಹೇಳುತ್ತಿದ್ದಾರೆ.

### ಸಮಾಧಿಯನ್ನು ಕುರಿತು

**ಶ್ರೀರಾಮಕೃಷ್ಣರು:** ''ಸಚ್ಚಿದಾನಂದನ ಸಾಕ್ಷಾತ್ಕಾರ ಆಯಿತು ಎಂದರೆ ಸಮಾಧಿ ಉಂಟಾಗುತ್ತದೆ. ಬಳಿಕ ಕರ್ಮತ್ಯಾಗವಾಗಿ ಬಿಡುತ್ತದೆ. ನಾನು ಸಂಗೀತ ವಿದ್ವಾಂಸರ ಸಂಬಂಧವಾಗಿ ವರ್ಣಿಸುತ್ತಿರುವಾಗ ಆತನೇ ಬಂದುಬಿಟ್ಟರೆ, ಇನ್ನು ಆತನ ವಿಷಯವಾಗಿ ವರ್ಣಿಸುವ ಆವಶ್ಯಕತೆಯೇನಿದೆ? ಜೇನುಹುಳು ಎಲ್ಲಿಯವರೆಗೆ ಝೇಂಕರಿಸುತ್ತಿರುತ್ತದೆ? ಹೂವಿನ ಮೇಲೆ ಕೂರದವರೆಗೆ. ಆದರೆ ಸಾಧಕ ಕರ್ಮತ್ಯಾಗ ಮಾಡಕೂಡದು. ಪೂಜೆ, ಜಪ, ಧ್ಯಾನ, ಸಂಧ್ಯಾವಂದನೆ, ತೀರ್ಥಯಾತ್ರೆ ಇವನ್ನೆಲ್ಲ ಮಾಡಲೇಬೇಕು.''

ಸಮಾಧಿಯನ್ನು ಕುರಿತಾದ ಪಾತಂಜಲ ಯೋಗಸೂತ್ರವು ಹೀಗಿದೆ: *(೩.೩)*

**ತದೇವ ಅರ್ಥಮಾತ್ರನಿರ್ಭಾಸಂ ಸ್ವರೂಪಶೂನ್ಯ ಇವ ಸಮಾಧಿಃ ॥**

''ಧ್ಯೇಯವಸ್ತುವೊಂದೇ (ಅರ್ಥಮಾತ್ರ) ಬೆಳಗುತ್ತಿದ್ದು (ಮನಸ್ಸು) ತನ್ನ ಸ್ವರೂಪವನ್ನು ಕಳೆದುಕೊಂಡಂತಿದ್ದರೆ (ಆ ಸ್ಥಿತಿಯೇ) ಸಮಾಧಿ.'' ಈ ಸ್ಥಿತಿಯಲ್ಲಿ ಧ್ಯೇಯವಸ್ತುವನ್ನು ಪ್ರತಿಬಿಂಬಿಸುವ ಒಂದೇ ಚಿತ್ತವೃತ್ತಿ ಮನಸ್ಸಿನಲ್ಲಿರಬೇಕು. ಅದಕ್ಕೆ ಸಂಬಂಧಪಟ್ಟ ಇನ್ನಾವ ವೃತ್ತಿಯೂ ಮನಸ್ಸಿನಲ್ಲಿರಬಾರದು. ಒಂದೇ ವೃತ್ತಿಯು ನಿರಂತರವಾಗಿ ಮನಸ್ಸಿನಲ್ಲಿ ಹರಿಯುತ್ತಿರಬೇಕು. ಮನಸ್ಸು ಆ ವಸ್ತುವಿನಿಂದ ಸಂಪೂರ್ಣ ತುಂಬಿಕೊಂಡು ಅದು ತನ್ನ ಸ್ವರೂಪವನ್ನೇ ಕಳೆದುಕೊಂಡಂತಿರಬೇಕು. ಇದನ್ನು ಒಂದು ಸೂಕ್ತ ಉದಾಹರಣೆಯ ಮೂಲಕ ವಿವರಿಸಲಾಗಿದೆ. ಒಂದು ಸ್ಫಟಿಕದ ಪಕ್ಕದಲ್ಲಿ ಒಂದು ಜಪಾಕುಸುಮವನ್ನು ಇರಿಸಿದರೆ, ಸ್ಫಟಿಕವು ಕುಸುಮದ ಬಣ್ಣದಿಂದ ಸಂಪೂರ್ಣ ಆವೃತ್ತವಾಗಿ ತನ್ನ ಅಸ್ತಿತ್ವವನ್ನೇ ಕಳೆದುಕೊಂಡಂತಿರುತ್ತದೆ. ಶ್ರೀರಾಮಕೃಷ್ಣರು ಈ ವಿಷಯದಲ್ಲಿ ಕೊಡುವ ಉದಾಹರಣೆಯೂ ತುಂಬ ಸ್ವಾರಸ್ಯಕರವಾಗಿದೆ. ಸಂಗೀತಗಾರನು ಬರುವವರೆಗೆ ಅವನ ಬಗ್ಗೆ ಸಾಕಷ್ಟು ಮಾತನಾಡುತ್ತಿರುತ್ತೇವೆ. ಅವನೇ ಎದುರಿಗೆ ಬಂದ ಮೇಲೆ ಅವನ ಬಗೆಗಿನ ಎಲ್ಲ ಮಾತೂ ನಿಂತುಹೋಗಿ ಅವನು ಮಾತ್ರ ಉಳಿಯುತ್ತಾನೆ. ಹಾಗೆಯೇ ಸಮಾಧಿಯಲ್ಲಿ ಧ್ಯೇಯವಸ್ತುವಿಗೆ ಸಂಬಂಧಪಟ್ಟ ಬೇರೆ ಚಿತ್ತವೃತ್ತಿಗಳೆಲ್ಲ ನಿಂತೇಹೋಗುತ್ತವೆ. ಜೇನುಹುಳು ಹೂವಿನ ಮೇಲೆ ಕೂರುವವರೆಗೆ ಶಬ್ದ ಮಾಡುತ್ತದೆ. ಹೂವಿನ ಮೇಲೆ ಕುಳಿತು ಮಕರಂದವನ್ನು ಹೀರಲು ಪ್ರಾರಂಭಿಸುವುದು. ಆಗ ಶಬ್ದವೆಲ್ಲ ನಿಂತುಹೋಗುವುದು. ಹಾಗೆಯೇ ಮನಸ್ಸು ಧ್ಯೇಯವಸ್ತುವಿನಲ್ಲಿ (ಸಚ್ಚಿದಾನಂದದಲ್ಲಿ) ಸಂಪೂರ್ಣ ನೆಲೆನಿಂತು ಅದರ ಆನಂದದಲ್ಲಿ ತಲ್ಲೀನವಾಗುತ್ತದೋ ಆಗ ಬೇರೆಲ್ಲ ಆಲೋಚನೆಗಳೂ ನಿಂತುಹೋಗುತ್ತವೆ. ಹಾಗೆಯೇ ಪೂಜಾದಿ ಬಾಹ್ಯ ಕರ್ಮಗಳೂ ಸ್ವಾಭಾವಿಕವಾಗಿ ನಿಂತುಹೋಗುತ್ತವೆ. ಈ ಸ್ಥಿತಿಯನ್ನು ತಲುಪುವವರೆಗೂ ಇವುಗಳನ್ನು ಬಿಡಬಾರ

ದೆಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಈ ಸಂದರ್ಭದಲ್ಲಿ ಭಗವದ್ಗೀತೆಯ ಈ ಕೆಳಗಿನ ವಾಕ್ಯವನ್ನು ಸ್ಮರಿಸಿಕೊಳ್ಳಬಹುದು: *(೮.೫)*

**ಯಜ್ಞದಾನತಪಃಕರ್ಮ ನ ತ್ಯಾಜ್ಯಂ ಕಾರ್ಯಮೇವ ತತ್।**

''ಯಜ್ಞ, ದಾನ ಮತ್ತು ತಪಸ್ಸು — ಈ ಕರ್ಮಗಳನ್ನು ಬಿಡಲೇಬಾರದು. ಮಾಡಲೇಬೇಕು.'' ಯಜ್ಞವೆಂದರೆ ಪರಿಸರ ಸಂರಕ್ಷಣೆ. ದಾನವೆಂದರೆ ಸಮಾಜ ಸೇವೆ, ಹಾಗೂ ತಪಸ್ಸು ಎಂದರೆ ವೈಯಕ್ತಿಕ ಆಧ್ಯಾತ್ಮಿಕ ಸಾಧನೆ. ಈ ಎಲ್ಲ ಕರ್ಮಗಳನ್ನೂ ಭಗವದ್ಭಾವದಿಂದ ಮಾಡಬೇಕು. ಅವೂ ಆಧ್ಯಾತ್ಮಿಕ ಸಾಧನೆಯಾಗಬೇಕು.

ಬ್ರದರ್ ಲಾರೆನ್ಸ್ ಅವರ ಮಾತು ಇಲ್ಲಿ ಸ್ಮರಣಾರ್ಹ:

''ದೇವರೊಡನೆ ಇರಬೇಕಾದರೆ ಯಾವಾಗಲೂ ಚರ್ಚಿನಲ್ಲಿ ಇರಬೇಕಾದ ಆವಶ್ಯಕತೆಯಿಲ್ಲ. ನಾವು ನಮ್ಮ ಹೃದಯವನ್ನೇ ಮಂದಿರವನ್ನಾಗಿ ಮಾಡಿಕೊಳ್ಳಬಹುದು. ಆಗಾಗ ತಪ್ಪಿಸಿಕೊಂಡು ಅಲ್ಲಿಗೆ ಹೋಗಿ ಭಗವಂತನೊಡನೆ ಮೌನವಾಗಿ, ನಮ್ರವಾಗಿ ಮತ್ತು ಪ್ರೀತಿಯಿಂದ ಮಾತನಾಡಬಹುದು. ಪ್ರಾರ್ಥನೆಯ ಸಮಯವು ಬೇರೆ ಸಮಯದಿಂದ ಬೇರೆಯಾಗಿರಬೇಕೆಂದು ಭಾವಿಸುವುದು ದೊಡ್ಡ ತಪ್ಪು. ಪ್ರಾರ್ಥನೆಯ ಮೂಲಕ ದೇವರೊಡನೆ ಒಂದಾಗಿರುವುದು ಎಷ್ಟು ಮುಖ್ಯವೋ ಕೆಲಸದ ಸಮಯದಲ್ಲಿ ಕೆಲಸದ ಮೂಲಕ ಅವನೊಡನೆ ಒಂದಾಗಿರುವುದು ಅಷ್ಟೇ ಮುಖ್ಯ.''

## ಭಕ್ತಿಯೇ ಮುಖ್ಯ

ಶ್ರೀರಾಮಕೃಷ್ಣರು ಮುಂದುವರಿದು ಹೇಳುತ್ತಾರೆ: ''ಭಕ್ತಿಯೇ ಮುಖ್ಯವಾದದ್ದು. ಭಗವಂತನೇನೋ ಎಲ್ಲ ಭೂತಗಳಲ್ಲಿಯೂ ಇದ್ದಾನೆ. ಇದರಲ್ಲಿ ಸಂದೇಹವಿಲ್ಲ. ಆದರೆ ಭಕ್ತ ಯಾರೂ ಅಂತೀಯ? ಯಾರ ಮನಸ್ಸು ಭಗವಂತನಲ್ಲಿಯೇ ರತವಾಗಿದೆಯೊ ಆತ. ಅಹಂಕಾರ, ಅಭಿಮಾನ ಇರುವವರೆಗೆ ಮನಸ್ಸು ಹಾಗೆ ಮಾಡಲಾರದು. 'ಅಹಂ' ರೂಪದ ದಿಣ್ಣೆ ಮೇಲೆ ಭಗವಂತನ ಕೃಪಾರೂಪದ ನೀರು ಶೇಖರವಾಗದು. ಅದು ಕೆಳಕ್ಕೆ ಹರಿದುಬಂದುಬಿಡುತ್ತದೆ. ನಾನು ಕೇವಲ ಒಂದು ಯಂತ್ರ ಮಾತ್ರ.''

ಶ್ರೀ ಮಧುಸೂದನ ಸರಸ್ವತಿಗಳು ಭಕ್ತಿಯನ್ನು ಈ ಕೆಳಗಿನಂತೆ ವಿವರಿಸುತ್ತಾರೆ:

**ದ್ರುತಸ್ಯ ಭಗವದ್ಧರ್ಮಾತ್ ಧಾರಾವಾಹಿಕತಾಂ ಗತಾ।**
**ಸರ್ವೇಶೇ ಮನಸೋ ವೃತ್ತಿಃ ಭಕ್ತಿರಿತ್ಯಭಿಧೀಯತೇ ॥**

''ಭಗವತ್ಸಂಬಂಧವಾದ ಚಟುವಟಿಕೆಗಳ ಮೂಲಕ ಮನಸ್ಸಿನ ವೃತ್ತಿಯು ಕರಗಿ ಭಗವಂತನ ಕಡೆಗೆ ನಿರಂತರವಾಗಿ ಪ್ರವಹಿಸತೊಡಗುತ್ತದೆ. ಇದನ್ನೇ ಭಕ್ತಿಯೆಂದು ಕರೆಯುವುದು.''

ಈ ವಿಷಯವನ್ನು ಅರಗಿನ ಉದಾಹರಣೆಯ ಮೂಲಕ ಶ್ರೀ ಮಧುಸೂದನ ಸರಸ್ವತಿಗಳು ವಿವರಿಸುತ್ತಾರೆ. ಅರಗನ್ನು ಹಾಗೆಯೇ ಬಿಟ್ಟರೆ ನಿಧಾನವಾಗಿ ಶಿಥಿಲವಾಗುತ್ತದೆ. ಅದಕ್ಕೆ ಬೆಂಕಿ ತಗುಲಿದರೆ ಕರಗುತ್ತದೆ. ಅನಂತರ ಗಟ್ಟಿಯಾದಾಗ ಅದು ಹೊಸ ರೂಪವನ್ನು ಪಡೆಯುತ್ತದೆ. ಇನ್ನೊಮ್ಮೆ ಬೆಂಕಿ ತಗುಲಿದಾಗ ಇನ್ನೊಂದು ರೂಪವನ್ನು ಪಡೆಯಬಹುದು. ಅದನ್ನು ಕರಗಿಸಿ, ಅದಕ್ಕೆ ನಿರ್ದಿಷ್ಟ ಆಕಾರವನ್ನು ಕೊಟ್ಟು, ಮತ್ತೆ ಅದು ಬೆಂಕಿಯ ಸಂಪರ್ಕಕ್ಕೆ ಬರದಂತೆ ನೋಡಿಕೊಂಡರೆ ಆ ಆಕಾರ ಶಾಶ್ವತವಾಗಿ ಉಳಿಯುತ್ತದೆ. ನಮ್ಮ ಮನಸ್ಸು ಈ ಅರಗು ಇರುವಂತೆ. ಅದು ವಿಷಯಜಗತ್ತಿಗೆ ತೆರೆದುಕೊಂಡಿರುವುದರಿಂದ ಶಿಥಿಲವಾಗುತ್ತಾ ಹೋಗುತ್ತದೆ.ಯಾವುದೋ ಭಾವೋದ್ವೇಗದ ಬೆಂಕಿ ತಗುಲಿದಾಗ ಕರಗಿ ಆ ವಿಷಯದ ಆಕಾರವನ್ನು ಪಡೆಯುತ್ತದೆ. ಹೀಗೆ ಅದು ವಿವಿಧ ಭಾವಾವೇಶದಿಂದ ವಿವಿಧಾಕಾರವನ್ನು ಪಡೆಯುತ್ತದೆ. ಭಗವದ್ಭಕ್ತಿಯ ತಾಪಕ್ಕೆ ಅದನ್ನು ಒಳಪಡಿಸಿ ಅದು ಭಗವದಾಕಾರವನ್ನು ಪಡೆಯುವಂತೆ ಮಾಡಿ, ಮತ್ತೆ ಅದು ವಿಷಯಾಕಾರವನ್ನು ಪಡೆಯದಂತೆ ನೋಡಿಕೊಳ್ಳಬೇಕು. ಹೀಗೆ ಮನಸ್ಸಿನಲ್ಲಿ ಒಂದು ಭಗವದ್‌ವೃತ್ತಿ ರೂಪಿತವಾದರೆ ಆಗ ಮನಸ್ಸು ಭಗವಂತನಲ್ಲಿಯೇ ರತವಾಗಿರುತ್ತದೆ.

ಆದರೆ, ಶ್ರೀರಾಮಕೃಷ್ಣರು ಹೇಳುವಂತೆ, ಅಹಂಕಾರ ಅಭಿಮಾನಗಳಿದ್ದರೆ ಮನಸ್ಸು ಭಗವಂತನಲ್ಲಿ ರತವಾಗಲಾರದು. ಕೆಲವರಲ್ಲಿ ಅಹಂಕಾರ ಕಲ್ಲುಬಂಡೆಯಂತೆ ಇರುತ್ತದೆ, ಎಷ್ಟೇ ಮಳೆ ಸುರಿದರೂ ಏನೂ ಆಗುವುದೇ ಇಲ್ಲ. ಹೊಂಡದಲ್ಲಿ ನೀರು ನಿಲ್ಲುತ್ತದೆ ಮತ್ತು ಅದರಿಂದ ಅನೇಕರಿಗೆ ಲಾಭವೂ ಆಗುತ್ತದೆ. ಹಾಗೆಯೇ ತಾವು ಯಂತ್ರ ಮಾತ್ರ ಎಂದು ತಿಳಿದಿರುವವರಲ್ಲಿ ಭಗವಂತನ ಕೃಪಾರೂಪದ ನಾರು ಶೇಖರವಾಗುತ್ತದೆ. ಅದರಿಂದ ಅವರಿಗೂ ಪ್ರಯೋಜನ, ಇತರರೂ ಅದರಿಂದ ಲಾಭ ಪಡೆಯುತ್ತಾರೆ.

## ಸಮನ್ವಯ ಭಾವ

ಶ್ರೀರಾಮಕೃಷ್ಣರು: ''ಎಲ್ಲ ಮಾರ್ಗಗಳಿಂದಲೂ ಭಗವಂತನ ಸಾಕ್ಷಾತ್ಕಾರ ಪಡೆಯಬಹುದು. ಎಲ್ಲ ಧರ್ಮಗಳೂ ಸತ್ಯವಾದವೇ. ನಮ್ಮ ಮುಖ್ಯವಾದ ಕರ್ತವ್ಯ ಚಾವಣಿಗೆ ಹತ್ತಿ ಹೋಗುವುದು. ಆ ಕಾರ್ಯವನ್ನು ಮೆಟ್ಟಿಲ ಸಾಲಿನಿಂದಾಗಲಿ, ಬೊಂಬಿನ ಏಣಿಯಿಂದಾಗಲಿ ಅಥವಾ ಒಂದು ಹಗ್ಗದಿಂದಾಗಲಿ ಸಾಧಿಸಬಹುದು. ಅಷ್ಟೇ ಅಲ್ಲ ಕೇವಲ ಬೊಂಬಿನಿಂದಲೇ ಹತ್ತಿಬಿಡಬಹುದು.''

ಭಗವಂತನನ್ನು ಪಡೆಯುವುದಕ್ಕೆ ಕೆಲವರು ಸುಲಭ ಮಾರ್ಗವನ್ನೂ ಮತ್ತೆ ಕೆಲವರು ಕಠಿಣ ಮಾರ್ಗವನ್ನೂ ಅನುಸರಿಸುತ್ತಾರೆ. ಆದರೆ ಗುರಿ ಮಾತ್ರ ಒಂದೇ. ಪರ್ವತದ ತುದಿಯನ್ನು ಮುಟ್ಟಲು ಕೆಲವರು ರಸ್ತೆಯ ಮೂಲಕ ಹೋಗುತ್ತಾರೆ. ಆದರೆ ಕೆಲವರಿಗೆ ಕಾಲುಹಾದಿಯ ಕಠಿಣ ಮಾರ್ಗದಲ್ಲಿ ಹೋಗುವುದೇ

ಇಷ್ಟ. ಈಗಿನ ಕಾಲದಲ್ಲಿ ಚಾವಣಿಗೆ ಹೋಗಲು ಲಿಫ್ಟ್ ಇರುತ್ತದೆ. ಭಗವಂತನ ವಿಶೇಷ ಕೃಪೆಯಾದರೆ, He lifts you Up.

ಇನ್ನೊಂದು ಉದಾಹರಣೆಯ ಮೂಲಕ ಈ ವಿಷಯವನ್ನು ವಿವರಿಸಬಹುದು. ಆತ್ಯಂತಿಕ ಸತ್ಯವನ್ನು ಒಂದು ವೃತ್ತದ ಕೇಂದ್ರವೆಂದು ಪರಿಗಣಿಸಿದರೆ ಆ ಕೇಂದ್ರವನ್ನು ವಿವಿಧ ತ್ರಿಜ್ಯಗಳ ಮೂಲಕ ತಲುಪಬಹುದು. ಈ ತ್ರಿಜ್ಯಗಳನ್ನು ವಿವಿಧ ಮತಗಳೆಂದು ಪರಗಣಿಸಬಹುದು. ಪರಿಧಿಯ ಯಾವುದೇ ಭಾಗದಲ್ಲಿದ್ದರೂ ತ್ರಿಜ್ಯದ ಮೂಲಕ ಕೇಂದ್ರವನ್ನು ತಲುಪಬಹುದು. ಎಲ್ಲ ತ್ರಿಜ್ಯಗಳೂ ಒಂದೇ ಕೇಂದ್ರವನ್ನೇ ತಲುಪುತ್ತದೆ. ಆದ್ದರಿಂದ ಯಾವ ಮಾರ್ಗದಲ್ಲಿ ಹೋಗುತ್ತೇವೆ ಎಂಬುದು ಮುಖ್ಯವಲ್ಲ, ಕೇಂದ್ರವನ್ನು ತಲುಪುವುದು ಮುಖ್ಯ.

ಮಾರ್ಗದ ವಿಷಯದಲ್ಲಿ ಜಗಳ ಕಾಯುತ್ತ ನಿಜವಾದ ಗುರಿಯನ್ನು ಮರೆತುಬಿಡುತ್ತೇವೆ. ಗಂಡ-ಹೆಂಡತಿಯರು ಕಾರಿನಲ್ಲಿ ಒಂದು ಕಾರ್ಯಕ್ರಮಕ್ಕೆ ಹೋಗುತ್ತಿದ್ದರು. ಡ್ರೈವರ್‌ನಿಗೆ ದಾರಿ ಗೊತ್ತಿರಲಿಲ್ಲ. ಗಂಡ-ಹೆಂಡತಿಯರಿಗೆ ಮಾರ್ಗದ ವಿಷಯದಲ್ಲಿ ಜಗಳ ಪ್ರಾರಂಭವಾಯಿತು. ಡ್ರೈವರ್ ಬೇಸತ್ತು ಟೀ ಕುಡಿಯಲು ಹೋದ. ಅವನು ಎಷ್ಟು ಹೊತ್ತಾದರೂ ಬರದಿರಲು, ಗಂಡನೇ ಗಾಡಿ ಓಡಿಸಿಕೊಂಡು ತನಗೆ ತಿಳಿದ ಮಾರ್ಗದಲ್ಲಿ ಹೋದ. ಎಷ್ಟೇ ಸುತ್ತಾಡಿದರೂ ಕಾರ್ಯಕ್ರಮದ ಜಾಗಕ್ಕೆ ಹೋಗಲಾಗಲಿಲ್ಲ. ಆಗ ಆತ ಪತ್ನಿಗೆ ಶರಣಾದ. ಆಕೆ ಮಾರ್ಗ ತೋರಿಸಿ ಸರಿಯಾಗಿ ಕರೆದುಕೊಂಡು ಹೋದಳು. ಆದರೆ ಅಷ್ಟು ಹೊತ್ತಿಗೆ ಕಾರ್ಯಕ್ರಮವು ಮುಗಿದು ಹೋಗಿತ್ತು.

ಇದೇ ವಿಷಯವನ್ನು ಮುಂದುವರಿಸುತ್ತ ಶ್ರೀರಾಮಕೃಷ್ಣರು ಹೇಳುತ್ತಾರೆ ''ನೀವು ಹೇಳಬಹುದು: ಪರರ ಧರ್ಮಗಳಲ್ಲಿ ಅನೇಕ ಕುಂದುಕೊರತೆಗಳಿವೆ ಎಂಬುದಾಗಿ. ನನ್ನ ಉತ್ತರ: ಇದ್ದರೆ ತಾನೆ ಏನು? ಪ್ರತಿಯೊಂದು ಧರ್ಮದಲ್ಲೂ ಇದ್ದೇ ಇದೆ. ಎಲ್ಲರೂ ಭಾವಿಸುತ್ತಾರೆ, ತಮ್ಮ ಗಡಿಯಾರ ಸರಿಯಾಗಿ ನಡೆದುಕೊಂಡು ಹೋಗುತ್ತಿದೆ ಎಂಬುದಾಗಿ. ಆಂತರ್ಯದಲ್ಲಿ ವ್ಯಾಕುಲತೆ ಇದ್ದರೇ ಯಥೇಷ್ಟ. ಭಗವಂತನಲ್ಲಿ ಪ್ರೀತಿ ಇದ್ದರೆ ಸಾಕು. ಆತ ಅಂತರ್ಯಾಮಿ. ನಮ್ಮ ಆಂತರ್ಯದಲ್ಲಿರುವ ಪ್ರೀತಿ ವ್ಯಾಕುಲತೆ ಏನು ಎಂಬುದನ್ನು ಆತ ಅರಿತುಕೊಳ್ಳಬಲ್ಲ.''

ಇಲ್ಲಿ ಸಮರ್ಪಕವಾದ ಗಡಿಯಾರದ ಉದಾಹರಣೆಯನ್ನು ಶ್ರೀರಾಮಕೃಷ್ಣರು ಕೊಡುತ್ತಾರೆ. ಪ್ರತಿಯೊಂದು ಗಡಿಯಾರವೂ ಒಂದೊಂದು ರೀತಿ ಸಮಯ ತೋರಿಸುತ್ತದೆ. ಆದರೆ ಎಲ್ಲ ಗಡಿಯಾರವೂ ಸೂಚಿಸುವುದು ಒಂದು ಕಾಲವನ್ನು. ಮತ್ತು ಕಾಲವನ್ನು ಅರಿಯಲು ನಮಗೆ ಗಡಿಯಾರವಂತೂ ಬೇಕೇ ಬೇಕು. ಹಾಗೆಯೇ ಧರ್ಮಗಳಲ್ಲಿ ಎಷ್ಟೇ ದೋಷಗಳಿದ್ದರೂ ಅವೆಲ್ಲವೂ ಒಂದೇ ಸತ್ಯವನ್ನು ಸೂಚಿಸುತ್ತವೆ. ಮತ್ತು ಆ ಧರ್ಮಗಳ ಮೂಲಕವೇ ನಾವು ಆ ಸತ್ಯವನ್ನು ಅರಿಯಲು ಸಾಧ್ಯ. ಆಂತರಿಕ ವ್ಯಾಕುಲತೆಯೊಂದಿದ್ದರೆ ಯಾವುದೇ ಧರ್ಮದ ಮೂಲಕವಾದರೂ ಆ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳಬಹುದು. ಶ್ರೀರಾಮಕೃಷ್ಣರು ಇನ್ನೊಂದು ಉದಾಹರಣೆಯನ್ನು ಕೊಡುತ್ತಾರೆ. ಮಗು ತಂದೆಯ ಹೆಸರನ್ನು ಸರಿಯಾಗಿ ಉಚ್ಚರಿಸಲಾಗದೆ 'ಪಾ' ಎಂದು ಕರೆದರೂ ತಂದೆ ಓಗೊಡುತ್ತಾನೆ. ಅವನಿಗೆ ಗೊತ್ತಿರುತ್ತದೆ ಮಗು ತನ್ನನ್ನೇ ಕರೆಯುತ್ತಿದೆ ಎಂದು. ಅವನು ಅಲ್ಲಿ ಉಚ್ಚಾರಣೆಯ ದೋಷವನ್ನು ಗಮನಿಸುವುದಿಲ್ಲ. ಹಾಗೆಯೇ ಸಾಧಕನು ಅನುಸರಿಸುವ ಧರ್ಮದಲ್ಲಿ ದೋಷಗಳಿದ್ದರೂ, ಅವನ ವ್ಯಾಕುಲತೆಗೆ ಅನುಸಾರವಾಗಿ ಭಗವಂತನು ಅವನಿಗೆ ಒಲಿಯುತ್ತಾನೆ.

*(ಮುಂದುವರಿಯುವುದು)*

## ಶ್ರೀಮಾತೆಯವರ ಉಪದೇಶಗಳು



❋ **ಶಿಷ್ಯ :** ಯಾವ ಸ್ಥಳದಲ್ಲಿ, ಯಾವ ರೀತಿ ಸಾಧನೆ-ಭಜನೆ ಮಾಡಬೇಕು ?

**ಶ್ರೀಮಾತೆ :** ನೀರಿಗೆ ತಾವಾಗಿಯೇ ಇಳಿದರೂ ಸರಿ, ಯಾರಾದರೂ ತಳ್ಳಿಬಿಟ್ಟರೂ ಸರಿ, ಬಟ್ಟೆಯಂತೂ ಒದ್ದೆಯಾಗುವುದು. ಪ್ರತಿದಿನವೂ ಧ್ಯಾನ ಮಾಡು. ನಿನ್ನದು ಇನ್ನೂ ಎಳೆಯ ಮನಸ್ಸಲ್ಲವೆ ! ಧ್ಯಾನ ಮಾಡುತ್ತ ಮನಸ್ಸು ಸ್ಥಿರವಾಗುವುದು. ಯಾವಾಗಲೂ ವಿಚಾರ ಮಾಡು. ಯಾವ ವಸ್ತುವಿನ ಕಡೆಗೆ ಮನಸ್ಸು ಹೋಗುವುದೋ ಅದನ್ನು ಅನಿತ್ಯವೆಂದೇ ಭಾವಿಸಿ ಮನಸ್ಸನ್ನು ದೇವರಿಗೆ ಅರ್ಪಿಸಿಬಿಡು. ಒಬ್ಬ ವ್ಯಕ್ತಿ ಮೀನು ಹಿಡಿಯುತ್ತಿದ್ದ. ಅವನ ಪಕ್ಕದಲ್ಲೇ ವಾದ್ಯಗಳಿಂದ ಕೂಡಿದ ಮದುವೆ ಮೆರವಣಿಗೆ ಹೋಗುತ್ತಿತ್ತು. ಆದರೆ ಅವನ ಮನಸ್ಸೆಲ್ಲವೂ ಗಾಳದ ಕಡೆಗೇ ಇತ್ತು.

❋ **ಶಿಷ್ಯ :** ಜೀವನದ ಗುರಿ ಏನು ??

**ಶ್ರೀಮಾತೆ :** ಭಗವಂತನ ಸಾಕ್ಷಾತ್ಕಾರ ಮತ್ತು ಯಾವಾಗಲೂ ಅವನ ಪಾದಪದ್ಮಗಳಲ್ಲೇ ಮನಸ್ಸನ್ನಿಟ್ಟುಕೊಂಡಿರುವುದು. ನೀವು ಸಂನ್ಯಾಸಿಗಳು, ಶ್ರೀರಾಮಕೃಷ್ಣರಿಗೆ ಸೇರಿದವರು. ನಿಮ್ಮ ಇಹ, ಪರ ಎರಡನ್ನೂ ಅವರೇ ನೋಡಿಕೊಳ್ಳುತ್ತಾರೆ. ನೀವೇಕೆ ಚಿಂತೆ ಮಾಡುತ್ತೀರಿ ? ಯಾವಾಗಲೂ ಭಗವಂತನ ಧ್ಯಾನ ಮಾಡುತ್ತಲೇ ಇರಲಾಗುವುದೆ ? ಸ್ವಲ್ಪ ಹೊತ್ತು ತಿರುಗಾಡಿ, ಸ್ವಲ್ಪ ಹೊತ್ತು ದೇವರ ಧ್ಯಾನ ಮಾಡಿ.

*'ಶ್ರೀಶಾರದಾದೇವಿ ವಚನವೇದ', ಪು.೩೧೯*